ಸಿ.ಸಿ..ನಂ.68/2023
ಪಿ.ಡಬ್ಲ್ಯೂ-2

ದಿನಾಂಕ.20-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎನ್ ಎನ್ ವಕೀಲರಿಂದಃ**

1. ಚಾಸಾ 1 , 5 ರಿಂದ 7 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ . ಸಾಮಾನ್ಯವಾಗಿ ನಾನು ನನ್ನ ಮೇಲಾಧಿಕಾರಿ ಹೇಳಿದಂತೆ ಕೇಳಬೇಕು ಎಂದರೆ ಸರಿ .ನಾನು ದಿಃ23-8-2022 ರಿಂದು ಹೆಬ್ಬುಳ ಶಾಖೆಯ ಗಸ್ತಿನಲ್ಲಿ ಬಳಿಗ್ಗೆ 9-00 ಗಂಟೆಯಿಂದ ಇದ್ದೆ . ನೀವು ಆ ದಿನ ಗಸ್ತು ಕರ್ತವ್ಯದಲ್ಲಿ ಇದ್ದ ಬಗ್ಗೆ ನಿಮ್ಮ ಕರ್ತವ್ಯ ದಿನಚರಿಯಲ್ಲಿ ನಮೂದು ಆಗಿದೆಯಾ ಎಂದರೆ ನಮಗೆ ಕರ್ತವ್ಯದ ದಿನಚರಿಯಲ್ಲಿ ಕರ್ತವ್ಯ ವನ್ನು ನಮೂದು ಮಾಡಬೇಕೆಂದಿಲ್ಲ ಆದರೆ ನಮಗೆ ನಿಗದಿತವಾಗಿ ಇಂತಹ ದಿನ ಇಂತಹ ಕೆಲಸಕ್ಕೆ ಹೋಗಬೇಕು ಎಂದು ಬಿಟ್ ಡ್ಯೂಟಿ ಕೊಡುತ್ತಾರೆ .ನಿಮಗೆ ಬಿಟ್ ಡ್ಯೂಟಿ ಇತ್ತು ಎಂದು ತೋರಿಸಲು ಅಂತಹ ಯಾವುದಾದರೂ ದಾಖಲಾತಿ ಇರುತ್ತದೆಯಾ ಎಂದರೆ ನನಗೆ ನೆನಪಿಲ್ಲ. ಚಾಸಾ 1 ರವರಿಂದ ಬಾತ್ಮಿ ಬಂದ ವಿಷಯವನ್ನು ನನಗೆ ಬಳಿಗ್ಗೆ 10-00 ಗಂಟೆಗೆ ಪೋನ ಮುಖಾಂತರ ತಿಳಿಸಿರುತ್ತಾರೆ ಆ ಸಮಯದಲ್ಲಿ ಅವರು ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ . ಆ ಸಮಯದಲ್ಲಿ ಅವರು ನನಗೆ ಹೆಬ್ಬುಳ ಶಾಲೆಯ ಬಳಿ ಬರಲು ಹೇಳಿರುತ್ತಾರೆ . ಆ ದಿನ ನಾನು ನನ್ನ ವೈಯಕ್ತಿಕ ವಾಹನವಾದ ಬೈಕ ನಲ್ಲಿ ಗಸ್ತು ತಿರುಗುತ್ತಿದ್ದೆ . ಚಾಸಾ-1 ರವರು ಬೆಳಿಗ್ಗೆ 10-15 ರ ಸುಮಾರಿಗೆ ಅವರ ಇಲಾಖಾ ವಾಹನ ಬೈಕ ನಲ್ಲಿ ಹೆಬ್ಬುಳ ಶಾಲೆಯ ಹತ್ತಿರ ಬಂದಿರುತ್ತಾರೆ . ಆ ದಿನ ಬೈಕ ನಲ್ಲಿ ಅವರೊಬ್ಬರೆ ಬಂದಿರುತ್ತಾರೆ .ಚಾಸಾ -3 ಮತ್ತು 4 ರವರು ನಮ್ಮ ಇಲಾಖೆಯ ಹಲವಾರು ಪ್ರಕರಣದಲ್ಲಿ ಸಾಕ್ಷಿದಾರರಾಗಿ ಇರುತ್ತಾರೆ ಎಂದರೆ ಇಲ್ಲ . ಹೆಬ್ಬುಳ ಗ್ರಾಮವು ತುಂಬಾ ಜನವಸತಿ ಇರುವ ಪ್ರದೇಶ ಎಂದರೆ ಸರಿ . ಅಲ್ಲಿ ಪಕ್ಕದಲ್ಲಿ ಅನೇಕ ಮನೆಗಳು , ಹೊಟೆಲಗಳು ಹಾಗೂ ರಾಷ್ಟ್ರಿಯ ಹೆದ್ದಾರಿ ಇರುತ್ತದೆ ಎಂದರೆ ಸರಿ . ನಾನು ಕಳೆದ 6 ವರ್ಷಗಳಿಂದ ಹೆಬ್ಬುಳ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ಚಾಸಾ 1 ರವರು ಹೆಬ್ಬುಳ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು 2-3 ವರ್ಷವಾಗಿರಬಹುದು . ನೀವು 5-6 ವರ್ಷಗಳಿಂದ ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ನಿಮಗೆ ಹೆಬ್ಬುಳ ಗ್ರಾಮದ ಗ್ರಾಮಸ್ಥರು ಪರಿಚಯ ಇರುತ್ತಾರೆ ಎಂದರೆ

ಸರಿ .ಚಾಸಾ –1 ರವರು ಹೆಬ್ಬುಳ ಗ್ರಾಮದ ಗ್ರಾಮಸ್ಥರನ್ನು ಸಾಕ್ಷಿದಾರರಾಗಿ ಬರಬೇಕೆಂದು ಎಂದು ಕೇಳಿರುತ್ತಾರೆ ಆದರೆ ಯಾರು ಬಂದಿಲ್ಲ . ಈ ರೀತಿಯಾಗಿ ಸಾರ್ವಜನಿಕರನ್ನು ಕೇಳಿದ ಬಗ್ಗೆ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ . ಪಂಚರನ್ನು ಚಾಸಾ –1 ರವರು ಹೋಗಿ ಕರೆದು ಕೊಂಡು ಬಂದಿರುತಾರೆ .ಚಾಸಾ–1 ರವರು ಪಂಚರನ್ನು ಹೆಬ್ಬುಳ ಶಾಲೆ ಬಳಿ ಕರೆದು ಕೊಂಡು ಬಂದಿರುತ್ತಾರೆ . ಪಂಚರನ್ನು ಚಾಸಾ 1 ರವರು ಹೆಬ್ಬುಳ ಶಾಲೆ ಬಳಿ ಕರೆದು ಕೊಂಡು ಬಂದಾಗ ಅಂದಾಜು 12–00 ಗಂಟೆ ಆಗಿರಬಹುದು . ಅಲ್ಲಿಂದ ನಾವು 1 ನೆ ಅರೋಪಿ ಮನೆಗೆ ಇಲಾಖಾ ವಾಹನದಲ್ಲಿ ಹೋಗಿರುತ್ತೆವೆ ಆ ಇಲಾಖಾ ವಾಹನ ಜೀಪ ಆಗಿರುತ್ತದೆ . ಸದ್ರಿ ಜೀಪ ವನ್ನು ಹೆಬ್ಬುಳ ಶಾಲೆ ಬಳಿ ತರಬೇಕು ಎಂದು ಚಾಸಾ –1 ರವರು ಇಲಾಖಾ ಕಚೇರಿಗೆ ಪೋನ್ ಕರೆ ಮಾಡಿ ಇಲಾಖಾ ಜೀಪ ವನ್ನು ಹೆಬ್ಬುಳ ಶಾಲೆ ಬಳಿ ಕರೆತರಬೇಕು ಎಂದು ಹೇಳಿದ ಕಾರಣ ಇಲಾಖಾ ಜೀಪ ವನ್ನು ಹೆಬ್ಬುಳ ಶಾಲೆ ಬಳಿ ಚಾಲಕನು ಜೀಪ ನ್ನು ತಂದಿರುತ್ತಾನೆ . ಜೀಪವನ್ನು ಎಷ್ಟು ಗಂಟೆ ಗೆ ಚಾಸಾ–1 ರವರು ಇಲಾಖಾ ಕಚೇರಿಗೆ ಪೋನ ಮಾಡಿ ಕರೆದರು ಎಂದು ನನಗೆ ನೆನಪಿಲ್ಲ. ಸದ್ರಿ ಜೀಪ ನಂಬರವನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಆದರೆ ಇಲಾಖಾ ವಾಹನ ಎಂದು ನಮೂದು ಮಾಡಲಾಗಿದೆ . ಸದ್ರಿ ಜೀಪ ಬಂದಾಗ ಮಧ್ಯಾಹ್ನ 12–00 ಗಂಟೆ ಯಾಗಿತ್ತು .1 ನೇ ಆರೋಪಿ ಮನೆ ಬಳಿ ಹೋದಾಗ ಮಧ್ಯಾಹ್ನ 12–30 ಗಂಟೆ ಯಾಗಿತ್ತು . ನೀವು ಈಗ ಹೇಳಿದಂತೆ ಮೇಲ್ಕಂಡ ಎಲ್ಲಾ ಸಮಯಗಳನ್ನು ನಿಪಿ–2 ರಲ್ಲಿ ಕಾಣಿಸಿಲ್ಲ ಎಂದರೆ ಕೆಲವೊಂದನ್ನು ಕಾಣಿಸಿದ್ದೇವೆ ಕೆಲವೊಂದನ್ನು ಕಾಣಿಸಿಲ್ಲ. ಮಧ್ಯಾಹ್ನ 12–30 ಗಂಟೆಗೆ 1 ನೆ ಆರೋಪಿ ಮನೆ ಬಳಿ ಹೋದೆವು ಎಂದು ಹೇಳಿದಂತೆ ಆ ಸಮಯದಿಂದಲೇ ಪಂಚನಾಮೆ ಬರೆಯಲು ಪ್ರಾರಂಭಿಸಿರುತ್ತೇವೆ .ಸದ್ರಿ ಪಂಚನಾಮೆಯಲ್ಲಿ ಘಟನಾ ಸ್ಥಳಕ್ಕೆ ಹೋಗಿ ಮುಟ್ಟಿದ ಬಗ್ಗೆ ಸಮಯವನ್ನು ನಮೂದು ಮಾಡಿಲ್ಲ ಎಂದರೆ ಸರಿ .

2. ಪಂಚನಾಮೆಯನ್ನು ಮಧ್ಯಾಹ್ನ 12–30 ರಿಂದ 2–30 ರವರೆಗೆ ಬರೆದು ಮುಗಿಸಿರುತ್ತೆವೆ . ಸದ್ರಿ ಪಂಚನಾಮೆಯನ್ನು ಎಲ್ಲಿ ಬರೆದು ಮುಗಿಸಿರುತ್ತೀರಿ ಎಂದರೆ 2 ನೇ ಅರೋಪಿಯ ಮನೆ ಬಳಿ ಹೋಗಿ ಮುಗಿಸಿದ್ದು ಇರುತ್ತದೆ .ಪಂಚನಾಮೆಯನ್ನು 1 ನೆ ಅರೋಪಿಯ ಮನೆಯ ಬಳಿ ಪ್ರಾರಂಭಿಸಿ ನಂತರದಲ್ಲಿ 2 ನೆ ಅರೋಪಿಯ ಮನೆ ಬಳಿ ಮುಗಿಸಿರುತ್ತೇವೆ ಎಂದು ನಿಪಿ–2 ರಲ್ಲಿ ಕಾಣಿಸಿಲ್ಲ ಎಂದರೆ ಸರಿ . ಚಾಸಾ –3 ಮತ್ತು

4 ರವರು ನಿಮ್ಮ ಇಲಾಖೆಯ ದಿನಗೂಲಿ ನೌಕರರಾಗಿದ್ದು ಅವರನ್ನೆ ಸಾಕ್ಷಿದಾರರನ್ನಾಗಿ ಉಪಯೋಗಿಸಿಕೊಂಡು ಕಚೇರಿಯಲ್ಲಿ ಸದ್ರಿ ನಿಪಿ–2 ನ್ನು ತಯಾರಿಸಿದ್ದು ಎಂದರೆ ಸರಿಯಲ್ಲ . ಆದ್ದರಿಂದ ನಿಪಿ–2 ರ ಪಂಚನಾಮೆಯಲ್ಲಿ ಯಾವುದೆ ಸಮಯದ ಬಗ್ಗೆ ನಮೂದು ಮಾಡಿಲ್ಲ ಮತ್ತು ನಿಪಿ–2 ರಲ್ಲಿ ಹಾಗಾಗಿ ಸಮಯವನ್ನು ಮರೆಮಾಚಿ ಮತ್ತು ನಿಜವಾದ ವಿಷಯಗಳನ್ನು ಮರೆಮಾಚಿ ಪ್ರಕರಣ ಸೃಷ್ಟಿಸುವ ಸಲುವಾಗ ಸದ್ರಿ ನಿಪಿ–2 ನ್ನು ಕಚೇರಿಯಲ್ಲಿ ತಯಾರಿಸಿದ್ದು ಎಂದರೆ ಸರಿಯಲ್ಲ .

**3**. ಪರವಾನಿಗೆ ಹೊಂದಿದ ಬಂದೂಕು ಹಾಗೂ ನಾಡ ಬಂದುಕೂಗಳಿಗೆ ವ್ಯತ್ಯಾಸ ಇರುತ್ತದೆ ಎಂದರೆ ಸರಿ . ಆ ರೀತಿ ಬಂದೂಕುಗಳ ವಿನ್ಯಾಸವನ್ನು ನೋಡಿದ ಕೂಡಲೆ ಅದು ನಾಡಬಂದುಕೂ ಅಥವಾ ಪರವಾನಿಗೆ ಹೊಂದಿದ ಬಂದೂಾಕು ಎಂದು ಗೊತ್ತಾಗುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ . ಆ ರೀತಿ ನನಗೆ ತರಬೇತಿ ಇರುವುದಿಲ್ಲ .

**4.** ಯಾವುದೆ ಮಾಂಸವನ್ನು ನೋಡಿದ ತಕ್ಷಣವೇ ಅದು ಕೋಳಿ , ಕುರಿ ಅಥವಾ ಕಾಡು ಪ್ರಾಣಿಯ ಮಾಂಸ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ . ಆ ದಿನ ನಾವು ನೋಡಿದೆವು ಎಂದು ಹೇಳಲಾದ ಮಾಂಸ ಮಂಚದ ಕೆಳಗೆ ಇತ್ತು . ಮನೆಯಲ್ಲಿ ಎಷ್ಟು ರೂಮ ಗಳು ಇತ್ತು ಎಂದು ನನಗೆ ಗೊತ್ತಿಲ್ಲ . ನಾನಾಗಲಿ ಅಥವಾ ನನ್ನ ಮೇಲಾಧಿಕಾರಿಯಾಗಲಿ ಮನೆ ಒಳಗಡೆ ಶೋಧನೆ ಮಾಡಿರುತ್ತೇವೆ ಆದರೆ ಎಷ್ಟು ರೂಮ ಗಳು ಇರುತ್ತವೆ ಎಂದು ಗೊತ್ತಿಲ್ಲ . ಮಂಚದ ಕೆಳಗಡೆ ಸದ್ರಿ ಮಾಂಸ ಇತ್ತು ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೆ ಪೊಟೊ ಇಲ್ಲ ಎಂದರೆ ಸರಿ . ಬಂದೂಕು ಒಂದು ಬಟ್ಟೆಯಲ್ಲಿ ಸುತ್ತಿ ಮಂಚದ ಬಳಿ ಇಡಲಾಗಿತ್ತು . ಸದ್ರಿ ಬಂದೂಕೂ ಬಟ್ಟೆಯಲ್ಲಿ ಸುತ್ತಿ ಮಂಚದ ಬಳಿ ಇಡಲಾಗಿತ್ತು ಎಂದು ತೋರಿಸುವ ಯಾವುದೆ ಅಧಿಕೃತವಾದ ಪೊಟೊ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ .ನ್ಯಾಯಾಲಯದ ಮುಂದೆ ಇರುವ ಮು.ಮಾ1 ರಿಂದ 5 ರ ವಸ್ತುಗಳು ಆ ದಿನ ಆ ಮನೆಯಲ್ಲಿ ಇತ್ತು ಎಂದು ತೋರಿಸುವ ಬಗ್ಗೆ ಯಾವುದೆ ಅಧಿಕೃತವಾದ ದಾಖಲಾತಿ ಇಲ್ಲ ಎಂದರೆ ಪೊಟೊ ತೋರಿಸಿದರೆ ಹೇಳುತ್ತೇನೆ . ಸಾಕ್ಷಿಗೆ ಪೊಟೊ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಇಲ್ಲ ಎಂದು ಹೇಳಿರುತ್ತಾರೆ .

**5**. ಸದ್ರಿ ಆ ಮನೆಯ ಬಳಿ 12-30 ಕ್ಕೆ ಹೋಗಿದ್ದೆ ಎಷ್ಟು ಗಂಟೆ ವರೆಗೆ ಅಲ್ಲೆ ಇದ್ದೆ ಎಂದು ನನಗೆ ನೆನಪಿಲ್ಲ. ಯಾವುದೆ ಒಂದು ಘಟನಾ ಸ್ಥಳ ದಲ್ಲಿ ಒಂದು ವಸ್ತು ಸಿಕ್ಕಿದರೆ ಅದು ಯಾರಿಗೆ ಸಂಬಂಧಿಸಿದ್ದು ಅದು ಕಾನೂನಾತ್ಮಕವಾಗಿ ಇದೆಯೊ ಇಲ್ಲವೊ ಅದು ಯಾರಿಗೆ ಯಾವ ಮಾಲಿಕತ್ವಕ್ಕೆ ಸಂಬಂಧಿಸಿದ್ದು ಎಂದು ತನಿಖೆ ಮಾಡಿದ ಮೇಲೆ ಅದರ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ . ಬಾತ್ಮಿ ಆಧಾರದಲ್ಲಿ ನೀವು ಮೊದಲು ಪಂಚನಾಮೆಯನ್ನು ಬರೆಯಲು ಪ್ರಾರಂಭಿಸುತ್ತಿರಾ ಎಂದರೆ ತನಿಖೆ ಪ್ರಾರಂಭಿಸಿ ಪಂಚನಾಮೆ ಬರೆಯಲು ಪ್ರಾರಂಭಿಸಿರುತ್ತೇವೆ . ಸೃಷ್ಟಿಪಡಿಸಿದ ಪಂಚನಾಮೆ ಗೋಸ್ಕರ ಸದ್ರಿ ಪಂಚನಾಮೆಯನ್ನು ಅಲ್ಲಿ ಮಾಡಿದ್ದು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಚಾಸಾ-1 ರ ವರ ಬಳಿ ಎನರೋಲ್ಡ ಮೊಬೈಲ ಇರುತ್ತದೆ . ಈ ರೀತಿಯಾಗಿ ಆರೋಪಿ ಮನೆ ಬಳಿ ಹೋಗಿ ಪಂಚರ ಸಮಕ್ಷಮ ಹೋಗಿ ಪಂಚನಾಮೆಯನ್ನು ಬರೆಯಲಾಗಿತ್ತು ಎಂದು ತೋರಿಸುವ ಬಗ್ಗೆ ಪೊಟೊ ತೆಗೆಯಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ . ಆ ರೀತಿ ಯಾವ ತೊಂದರೆ ಇತ್ತು ಮತ್ತು ಆ ಸಮಯದಲ್ಲಿ ಪೊಟೊ ಯಾಕೆ ತೆಗೆಯಲಿಲ್ಲ ಎಂದುಪಂಚನಾಮೆಚಯಲ್ಲಿ ಬರೆಯಲು ಯಾವುದೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ . ನೀವು ಆ ದಿನ ಘಟನಾ ಸ್ಥಳಕ್ಕೆ ಹೋಗಲೆ ಇಲ್ಲ ಆ ಕಾರಣದಿಂದ ನಿಜಾಂಶ ವನ್ನು ನ್ಯಾಯಾಲಯದ ಮುಂದೆ ಹೇಳುತ್ತಿಲ್ಲ ಎಂದರೆ ಸರಿಯಲ್ಲ .

**6.** 1 ನೆ ಅರೋಪಿ ಮನೆ ಬಳಿ ಎಷ್ಟು ಸಮಯದ ವರೆಗೆ ಇದ್ದೆವು ಎಂದರೆ ನೆನಪಿಲ್ಲ. 1 ನೆ ಅರೋಾಪಿ ಮನೆ ಬಳಿವಿಚಾರಣೆ ಕೈಗೊಂಡು ಅಲ್ಲ್ಂದ ಮೆಣಸಿನ ಗದ್ದೆಗೆ ಪುನಃ ವಿಚಾರಣೆಗಾಗಿ ಹೋಗಿರುತ್ತೇವೆ . ಮೆಣಸಿನ ಗದ್ದೆ ಯಲ್ಲಿ ಅವರು ಎಲ್ಲಿ ನಿಂತು ಗುಂಡು ಹೊಡೆದರು ಎಲ್ಲಿ ಮಾಂಸ ತಯಾರಿಸಿದರು ಎಂದು ವಿಚಾರಿಸಿರುತ್ತೇವೆ . ಆರೋಪಿತರು ಎಷ್ಟು ದೂರದಿಂದ ಗುಂಡನ್ನು ಹೊಡೆದಿರುತ್ತಾರೆ ಎಂದುನೀವು ವಿಚಾರಸಿರುತ್ತೀರಾ ಎಂರೆ ನನ್ನ ಮೇಲಾಧಿಕಾರಿಗಳು ವಿಚಾರಿಸಿರುತ್ತಾರೆ ಹಾಗಾಗಿ ನನಗೆ ಗೊತ್ತಿಲ್ಲ . ಮೇಲಾಧಿಕಾರಿ ಗಳ ಜೊತೆ ನಾನು ಇದ್ದೆ ಆದರೆ ನನಗೆ ನೆನಪಿಲ್ಲ. ಯಾವುದೆ ಒಬ್ಬ ವ್ಯಕ್ತಿ ಗೆ ಆತನು ಸರಿಯಾಗಿ ವಿಚಾರಣೆ ಮಾಡಿದರೆ ಆತನು ವಿಚಾರಣೆ ಮಾಡಿದ ವಿಷಯ ಸತ್ಯವಾಗಿದ್ದರೆ ಎಲ್ಲಾ ವಿಚಾರ ನೆನಪು ಇರುತ್ತದೆ ಎಂದರೆ ಸರಿಯಲ್ಲ ಕೆಲವೊಂದು ನೆನಪು ಇರುತ್ತದೆ . ಕೆಲವೊಂದು ನೆನಪು ಇರುವುದಿಲ್ಲ . ಆರೋಪಿತರು 2 ಗುಂಡು ಹಾರಿಸಿರುತ್ತಾರೆ ಎಂದು ಅವರೆ

ಹೇಳಿರುತ್ತಾರೆ . ಸಾಮಾನ್ಯವಾಗಿ ಒಂದು ಪ್ರಾಣಿಗೆ ಗುಂಡು ಹಾರಿಸಿದರೆ ಗುಂಡನ್ನು ಹಾರಿಸಿದರೆ ಆ ಪ್ರಾಣಿಯ ದೇಹದ ಭಾಗದಿಂದ ರಕ್ತ ಚಿಮ್ಮುತ್ತದೆ ಎಂದರೆ ಸರಿ . ಆ ರೀತಿಯಾಗಿ ದೇಹದ ಭಾಗದಲ್ಲಿ ರಕ್ತ ಚಿಮ್ಮಿದ್ದರೆ ಅದು ಕೆಳಗೆಲ್ಲಾ ಬಿದ್ದು ಕಲೆ ಯಾಗಿರುತ್ತದೆ ಎಂದರೆ ಸರಿ . ಪಂಚನಾಮೆಯಲ್ಲಿ ಆ ಪ್ರಾಣಿಯ ರಕ್ತ ಚಿಮ್ಮಿದ್ದ ಬಗ್ಗೆ ಪಂಚನಾಮೆಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಅದು ಮಳೆಗಾಲ ವಾದ ಕಾರಣ ನಾವು ಅದನ್ನು ನಮೂದು ಮಾಡಿಲ್ಲ .ಪಂಚನಾಮೆಯಲ್ಲಿ ಆ ದಿನ ಮಳೆಗಾಲ ವಾಗಿದ್ದು ಮಳೆಯ ಕಾರಣ ಬಿದ್ದಿದ್ದ ರಕ್ತ ಮಳೆ ನೀರಿನಲ್ಲಿ ತೆಳಿ ಹೋಗಿರುತ್ತದೆ ಎಂದು ಪಂಚನಾವೆಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ .

7. ಮೆಣಸಿನ ಗದ್ದೆ ಗೆ ಹೋದ ಬಗ್ಗೆ ಪೊಟೊ ತೆಗೆಯಲಾಗಿರುತ್ತದೆ .ಆ ಪೊಟೊ ಯಾವುದು ಎಂದು ಸಾಕ್ಷಿಯ ಕೈಯಲ್ಲಿ ಪೊಟೊ ಕೊಟ್ಟಾಗ ಮೆಣಸಿನ ಗದ್ದೆಯಲ್ಲಿ ಪೊಟೊ ತೆಗೆದಿಲ್ಲ ಆದರೆ ಮಾಂಸ ಕೊಚ್ಚಿ ತಯಾರಿಸಿದ ಸ್ಥಳದಲ್ಲಿ ಪೊಟೊ ತೆಗೆಯಲಾಗಿರುತ್ತದೆ . ಆ ರೀತಿ ನೀವು ಮೆಣಸಿನ ಗದ್ದೆ ಹೋದ ಬಗ್ಗೆ ಪೊಟೊ ವನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿಲ್ಲ ಎಂದರೆ ಸರಿ . ನಾನು ಆ ದಿನ ಮೆಣಸಿನ ಗದ್ದೆ ಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಆ ಕಾರಣದಿಂದ ಆ ಪೊಟೊ ಕೂಡ ಇಲ್ಲ ಎಂದರೆ ಸರಿಯಲ್ಲ . ಪಂಚನಾಮೆಯಲ್ಲಿ ಎಲ್ಲಿಂದ ಎಲ್ಲಿ ಪಂಚನಾಮೆ ಬರೆಯಲಾಗಿದೆ ಎಂದು ನಮೂದು ಮಾಡಿಲ್ಲ . ಮೆಣಸಿನ ಗದ್ದೆ ಯಿಂದ ಎಷ್ಟು ಗಂಟೆಗೆ ಹೊರಟಿರುತ್ತೆವೆ ಎಂದು ನನಗೆ ನೆನಪಿಲ್ಲ. ಅಲ್ಲಿಂದ ನಾವು ಮಾಂಸ ಕೊಚ್ಚಿದ ಸ್ಥಳಕ್ಕೆ ಹೋಗಿರುತ್ತೇವೆ ಅವರು ಕರೆದು ಕೊಂಡು ಹೋದರು . ಮಾಂಸ ಕೊಚ್ಚಿದ ಸ್ಥಳ ಅರಮತಿ ಸ್ಥಳ ವಾಗಿತ್ತು . ಅಲ್ಲಿ ಎಷ್ಟು ಗಂಟೆಗೆ ಹೋಗಿ ತಲುಪಿರುತ್ತೆವೆ ಎಂದು ನೆನಪಿಲ್ಲ. ಸದ್ರಿ ಮಾಂಸವನ್ನು ಹಳ್ಳದಲ್ಲಿ ಕೊಚ್ಚಲಾಗಿರುತ್ತದೆ ಅದು ಎಷ್ಟು ಅಗಲದ ಹಳ್ಳ ಎಂದು ನನಗೆ ಗೊತ್ತಿಲ್ಲ . ಮಾಂಸವನ್ನು ಹಳ್ಳದಲ್ಲಿ ಕೊಚ್ಚಲಾಗಿರುತ್ತದೆ ಎಂದು ಪಂಚನಾಮೆಯಲ್ಲಿ ಬರೆಯಲಾಗಿರುತ್ತದೆ . ಹಳ್ಳದಲ್ಲಿ ಕೊಚ್ಚಲಾಗಿದ್ದು ಮಳೆಗಾಲವಾದ ಕಾರಣ ಮಾಂಸ ಕೊಚ್ಚಿದ ಕುರುಹು ಕಂಡು ಬಂದಿಲ್ಲ .ಕರುಳನ್ನು ನೋಡಿದ ತಕ್ಷಣ ಸಾಧಾರಣವಾಗಿ ಯಾವ ಪ್ರಾಣಿಯದ್ದು ಎಂದುಒಮ್ಮೆಲೆ ನೋಡಿ ಹೇಳಲು ಸಾಧ್ಯ ಇಲ್ಲ .

8. ಜಿಂಕೆಯ ಚರ್ಮ ಕ್ಕೆ ಗುಂಡು ತಗುಲಿದ ನಿಶಾನೆ ಇತ್ತು . ಅದು ಹೊಟ್ಟೆಯ ಬದಿಯಲ್ಲಿ ನಿಶಾನೆಯಾಗಿದ್ದು ಅದು ಹೊಟ್ಟೆಯ ಯಾವ ಬದಿಯಲ್ಲಿ ತಾಗಿತ್ತು ಎಂದು ನನಗೆ ನೆನಪಿಲ್ಲ.

9. ನಾಡಬಂದೂಕು ಎಂದರೆ ಪರವಾನಿಗೆ ಇಲ್ಲದೆ ಇರುವ ಬಂದೂಕು ಎಂದರೆ ಸರಿ . ಒಂದು ಗಾತ್ರದ ತೂತು ಆಗಿತ್ತು ಅದು ಎಷ್ಟು ಅಳತೆಯದ್ದು ಎಂದು ನನಗೆ ನೆನಪಿಲ್ಲ. ಸದ್ರಿ ಜಿಂಕೆಯ ಹೊಟ್ಟೆಯ ಭಾಗಕ್ಕೆ ಗುಂಡು ತಗುಲಿ ತೂತು ಆಗಿತ್ತು ಎಂದು ಪಂಚನಾಮೆಯಲ್ಲಿ ಬರೆದಿಲ್ಲ . ನೀವು ಅರಮತ್ತಿ ಹಳ್ಳಕ್ಕೆ ಹೋದದ್ದು ಇಲ್ಲ ಆ ಕಾರಣದಿಂದ ಯಾವುದೊ ಒಂದು ನೀರುವ ಸ್ಥಳದ ಹಳ್ಳದ ಪೊಟೊ ತೆಗೆದು ಅದೇ ಅರಮತ್ತಿ ಹಳ್ಳ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಆ ಕಾರಣದಿಂದ ಅರೆಮತ್ತಿ ಹಳ್ಳದಲ್ಲಿ ಅದನ್ನು ಕೊಚ್ಚಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಲ್ಲಿ ಎಷ್ಟು ಸಮಯದ ವರೆಗೆ ಇದ್ದೆ ಎಂದು ನನಗೆ ನೆನಪಿಲ್ಲ. ಅರೆಮತ್ತಿ ಹಳ್ಳದ ಹತ್ತಿರ ಕರ್ತವ್ಯ ಮುಗಿಸಿ 2 ನೆ ಅರೋಪಿ ಮನೆ ಬಳಿ ಹೋದೆವು .2 ನೆ ಅರೋಪಿ ಮನೆಗೆ ಹೋದ ಪೊಟೊ ತೆಗೆಯಲಿಲ್ಲ . ಆತನ ಮನೆಗೆ ಬೀಗ ಹಾಕಲಾಗಿತ್ತು ಅದರ ಪೊಟೊ ತೆಗೆಯಲಿಲ್ಲ . ನ್ಯಾಯಾಲಯದ ಮುಂದೆ ಇರುವ ಸ್ಟಿಲ ಪಾತ್ರೆ ಮುಚ್ಚಲ ಹಾಗೂ ಕತ್ತಿ ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಮತ್ತು ಮನೆಗಳಲ್ಲಿ ಸಿಗುತ್ತದೆ ಎಂದರೆ ಸರಿ . ಪುರವವಣಿ ಪಂಚನಾಮೆ ಯನ್ನು ಬೇಕಾಗುವ ರೀತಿಯಲ್ಲಿ ಪ್ರಕರಣ ಸೃಷ್ಟಿಸಲು ಠಾಣೆಯಲ್ಲಿ ಅದನ್ನು ಸೃಷ್ಟಿಸಿದ್ದು ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಹಾಜರ ಪಡಿಸಿದ ಪೊಟೊಗಳು ಪೇಪರನ ಪೊಟೊ ವಾಗಿದ್ದು ಮೂಲ ಪೊಟೊಗಳನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿಲ್ಲ ಎಂದರೆ ಸರಿ. ಹಾಗಾದರೆ ಈ ಎಲ್ಲಾ ಪೊಟೊಗಳನ್ನು ಈ ಪ್ರಕರಣಕ್ಕೆ ಅನೂಕೂಲವಾಗುವಂತೆ ನೀವು ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . 1 ರಿಂದ 3 ನೇ ಅರೋಪಿಗಳು ಅರಣ್ಯ ಇಲಾಖೆ ಸಿಬ್ಬಂದಿಗಳ ವಿರುದ್ದ ದೂರನ್ನು ಕೊಡುವುದು ಅತಿಕ್ರಮಣ ಹೋರಾಟಗಾರರು ಎಂದರೆ ಸರಿಯಲ್ಲ . ಆ ರೀತಿ ನಿಮ್ಮ ಇಲಾಖೆಯವರು ಮತ್ತು ನೀವು ಆರೋಪಿತರ ಮೇಲೆ ಇರುವ ದ್ವೇಷದಿಂದ ಈ ಪ್ರಕರಣ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . ಕಾಡು ಪ್ರಾಣಿಗಳು ಮತ್ತು ಈ ಜಿಂಕೆ ಹಾಗೂ ಇತರ ಪ್ರಾಣಿಗಳು ಸಾಂಕ್ರಾಮಿಕ ರೋಗದಿಂದ ಆಗಾಗ ಸಾಯುತ್ತಿರುತ್ತದೆ ಎಂದರೆ ಸರಿ . ಆರೋಪಿಗಳ ಮೇಲೆ ಪ್ರಕರಣವನ್ನು ದಾಖಲಿಸಲೇ ಬೇಕು ಎಂಬ ಉದ್ದೇಶದಿಂದ ನಿಮ್ಮ ಇಲಾಖೆಯ ದಿನಗೂಲಿ ನೌಕರರನ್ನು ಸಾಕ್ಷಿದಾರರನ್ನಾಗಿ ಉಪಯೊಗಿಸಿಕೊಂಡು ಸಾಂಕ್ರಾಮಿಕ ರೋಗದಿಂದ ಸತ್ತ ಜಿಂಕೆಯ ಕಳೆಬರಹ ಇಟ್ಟು ಕೊಂಡು ದ್ವೇಷದಿಂದ ಅರೋಪಿ ಮೇಲೆ ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ . ನೀವು ಚಾಸಾ –1 ರವರು ಹೇಳಿದಂತೆ

ಘಟನಾ ಸ್ಥಳಕ್ಕೆ ಹೋದದ್ದು ಇಲ್ಲ ಎಂದರೆ ಸರಿಯಲ್ಲ . ಘಟನಾ ಸ್ಥಳದಲ್ಲಿ ಪಂಚರೊಂದಿಗೆ ಪಂಚನಾಮೆ ಮಾಡಿದ್ದು ಇಲ್ಲ . ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡದ್ದು ಇಲ್ಲ ಎಂದರೆ ಸರಿಯಲ್ಲ. ಇಲಾಖೆಯ ಶಾಖೆಯಲ್ಲಿ ಈ ರೀತಿಯಾದ ಪರಿಕರ ಗಳನ್ನು ಇಟ್ಟು ಪ್ರಕರಣವನ್ನು ಸೃಷ್ಟಿಸಿರುತ್ತೀರಿ ಎಂದರೆ ಸರಿಯಲ್ಲ . 3 ನೇ ಅರೋಪಿಗೂ ಅವರ ಮನೆಯಲ್ಲಿ ಕುಟುಂಬಸ್ಥರ ಮದ್ಯೆ ಕಲಹ ಇತ್ತು ಆ ಕಾರಣದಿಂದಲೇ ಅವರುಗಳೆ ಆ ಬಂದೂಕನ್ನು 1 ನೆ ಅರೋಪಿ ಮನೆಯಲ್ಲಿ ಇಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .ಆ ರೀತಿಯಾದ ಪ್ರಕರಣ ಅವರ ಕುಟುಂಬದಲ್ಲಿ ಇತ್ತು ಎಂದು ಅದರ ಬಗ್ಗೆ ದಾಖಲಾತಿ ನಾನು ನೊಡಿಲ್ಲ . 3 ನೆ ಅರೋಪಿಯನ್ನು ಅರೋಪಿ ಜೊತೆಗೆ 1 ನೆ ಅರೋಪಿಯನ್ನು ಆ ಕಾರಣದಿಂದ ಸೇರಿಸಬೇಕು ಎಂದು ನೀವು ಈ ಸುಳ್ಳು ಕೇಸ ನ್ನು ಹಾಕಿದ್ದು ಎಂದರೆ ಸರಿಯಲ್ಲ . ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ . ನಾನು ಘಟನಾ ಸ್ಥಳಕ್ಕೆ ಹೊದದ್ದೆ ಇಲ್ಲ ಎಂದರೆ ಸರಿಯಲ್ಲ . ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳದ ಚೆಕು ಬಂದಿಯಲ್ಲಿರುವ ವ್ಯಕ್ತಿಗಳನ್ನು ಸಾಕ್ಷಿದಾರರನ್ನಾಗಿ ಪಡೆದುಕೊಳ್ಳಲು ಇತ್ತಾ ಎಂದರೆ ಇಲ್ಲ . ಆರೋಪಿತರಿಗೆ ಮತ್ತು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲಿಗೂ ಹಾಗೂ ಫೊಟೊದಲ್ಲಿರುವ ಪರಿಕರಗಳಿಗೂಾ ಯಾವುದೆ ಸಂಬದ ಇಲ್ಲ ಎಂದರೆ ಸರಿಯಲ್ಲ . ಪ್ರಕರಣದ ಅಂಕಿಅಂಶಗೊಸ್ಕರ ಹಾಗೂ ಅರೋಪಿತರ ಮೇಲೆ ಇರುವ ದ್ವೇಷದಿಂದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.